ಆ) ಹಾಗಿದ್ದಲ್ಲಿ ಮೇಲ್ದರ್ಜೆಗೇರಿಸಲು ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪ್ರಸ್ತಾವನೆ ಬಂದಿದೆ.

ಆ) ಸೋಮವಾರ ಪೇಟೆ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ 185501 ಇದ್ದು ಮಾರ್ಗಸೂಚಿ ಪ್ರಕಾರ ತಾಲ್ಲೂಕಿನಲ್ಲಿ ಈಗಾಗಲೇ 3 ಸಮುದಾಯ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ (ಸೋಮವಾರ ಪೇಟೆ, ಶನಿವಾರ ಸಂತೆ ಮತ್ತು ಕುಶಾಲನಗರ) ಅದರಲ್ಲೂ ಸೋಮವಾರ ಪೇಟೆ ತಾಲ್ಲೂಕು ಆಸ್ಪತ್ರೆ 125 ಹಾಸಿಗೆಗಳ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿದೆ. ಮಾರ್ಗಸೂಚಿ ಪ್ರಕಾರ ಹೆಚ್ಚಿನ ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶ ಇರುವುದಿಲ್ಲ.

1061 (1292) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಅಜ್ಜಂಪುರ ಮತ್ತು ಬೀರೂರು ಘಾರಂಗಳಲ್ಲಿ ಕಳೆದ 5 ವರ್ಷಗಳಿಂದ ಎಷ್ಟು ಅಮೃತ್‌ಮಹಲ್ ತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ;

ಆ) ಸ್ವಯಂ ಸೇವಾ ಸಂಘಗಳಿಗೆ ಗೋತಳಿಗಳ ಸಂರಕ್ಷಣೆ ಜವಾಬ್ದಾರಿಯನ್ನು ವಹಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಅಜ್ಜಂಪುರ ಮತ್ತು ಇದಕ್ಕೆ ಸಂಬಂಧಿಸಿದ ಉಪಕೇಂದ್ರಗಳಲ್ಲಿ ಮತ್ತು ಬೀರೂರು ಕ್ಷೇತ್ರಗಳಲ್ಲಿ ಸುಮಾರು 1500 ಅಮೃತ್‌ಮಹಲ್ ತಳಿ ರಾಸುಗಳನ್ನು ಸಾಕಲ್ಪಡುತ್ತಿದ್ದು ಇವುಗಳಲ್ಲಿ ಉತ್ತಮ ಕರುಗಳನ್ನು ಉತ್ಪಾದನೆ ಮಾಡಿ ತಳಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹಾಗೂ ಬೇಸಾಯಕ್ಕೆ ವಿತರಿಸಲಾಗುತ್ತಿದೆ. ಕಳೆದ 5 ವರ್ಷಗಳಲ್ಲಿ 573 ಅಮೃತ್‌ಮಹಲ್ ಗಂಡು

ಕರುಗಳನ್ನು ರೈತರಿಗೆ ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗಿದ್ದು ಈ ಮೂಲಕ ಸರ್ಕಾರಕ್ಕೆ ರೂ.76.58 ಲಕ್ಷಗಳ ಆದಾಯ ಬಂದಿರುತ್ತದೆ.

ಆ) ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣಾ ಯೋಜನೆಯ ಅಡಿಯಲ್ಲಿ ಪ್ರತಿ ಜಿಲ್ಲೆಗೆ ಸ್ಥಳೀಯ ಗೋತಳಿಗಳನ್ನು ಅಭಿವೃದ್ಧಿಪಡಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮತ್ತು ಟ್ರಸ್ಟ್‌ಗಳಿಗೆ ರೂ.10.00 ಲಕ್ಷಗಳ ಸಹಾಯಾನುದಾನ ನೀಡುವ ಕಾರ್ಯಕ್ರಮವಿದ್ದು, ಪ್ರಸಕ್ತ ಸಾಲಿಗೆ ಸರ್ಕಾರ ಮಂಜೂರಾತಿ ನೀಡಿದೆ ಮತ್ತು ರೂ.270.00 ಲಕ್ಷಗಳ ಅನುದಾನ ಸಹ ನಿಗದಿಪಡಿಸಿದೆ.

ಇ) ಈ ಯೋಜನೆ ಅಡಿ ಪ್ರತಿ ಜಿಲ್ಲೆಗೆ ರೂ.10.00 ಲಕ್ಷಗಳ ಅನುದಾನ ನಿಗದಿಪಡಿಸಿದ್ದು ಪ್ರತಿ ಜಿಲ್ಲೆಯಲ್ಲಿನ ಸ್ವಯಂ ಸೇವಾ ಸಂಸ್ಥೆಗಳು, ಜಿಲ್ಲಾಧಿಕಾರಿಗಳು/ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿತವಾದ ಜಿಲ್ಲಾ ಪ್ರಾಣಿ ಹಿಂಸೆ ಪ್ರತಿಬಂಧಕ ಸಂಸ್ಥೆ ಮುಖಾಂತರ ಅರ್ಜಿ ಸಲ್ಲಿಸಿದಲ್ಲಿ, ಈ ಯೋಜನೆ ಮಂಜೂರಾತಿ ಆದೇಶದಲ್ಲಿನ ನಿಯಮಾನುಸಾರ ಸಹಾಯಾನುದಾನ ಬಿಡುಗಡೆ ಕ್ರಮಕೈಗೊಳ್ಳಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಗರಿಷ್ಠ ರೂ.10.00 ಲಕ್ಷಗಳ ಅನುದಾನ ಈ ಯೋಜನೆಯಡಿ ನೀಡಬಹುದಾಗಿದೆ.

1062 (1293) ಶ್ರೀ ಕೆ.ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;

ಅ) ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ರಾಮಚಂದ್ರಪುರ ಮಠದಲ್ಲಿ ಭಾರತೀಯ ಗೋತಳಿಯನ್ನು ಅಭಿವೃದ್ಧಿಪಡಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಜ್ಜಂಪುರ ಮತ್ತು ಬೀರೂರು ಫಾರಂನಲ್ಲಿರುವ ಅಮೃತ್‌ಮಹಲ್ ತಳಿಗಳನ್ನು ಅಭಿವೃದ್ಧಿಪಡಿಸಲು ಯಾವುದೇ ಷರತ್ತಿಲ್ಲದೇ ಅವರ ಸ್ವಾಧೀನಕ್ಕೆ ವಹಿಸಲು ಕ್ರಮಕೈಗೊಳ್ಳಲಾಗುವುದೇ;

ಇ) ಸಾಧ್ಯವಿದ್ದಲ್ಲಿ, ಅಮೃತ್‌ಮಹಲ್ ಹಳ್ಳಿಕಾರ್, ದೇವದಾನಿ, ಕೃಷ್ಣ ಮಾಲೆತಳಿ ಮತ್ತು ಮಲೆನಾಡು ಗಿಡ್ಡ ತಳಿಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ